# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು – 560003

# KARNATAKA SCHOOL EXAMINATION AND ASSESSMENT BOARD

Malleshwaram Bengaluru-560003

## 2025–26ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ

## S.S.L.C MODEL QUESTION PAPER - 02 : 2025-26

ವಿಷಯ : ದ್ವಿತೀಯ ಭಾಷೆ ಕನ್ನಡ

**SUBJECT : Second Language Kannada**

ಸಮಯ : 3 ಗಂಟೆ | ವಿಷಯ ಸಂಕೇತ : **33K**

ಗರಿಷ್ಠ ಅಂಕಗಳು : 80 | **Subject Code : 33K**

**ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :**

1. ಈ ಪ್ರಶ್ನೆ ಪತ್ರಿಕೆಯು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4x1=4**

1. 'ಸ್ವರದ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳನ್ನು ಹೀಗೆ ಕರೆಯುತ್ತಾರೆ' –
   ಎ) ಸ್ವರಗಳು
   ಬಿ) ಯೋಗವಾಹಗಳು
   ಸಿ) ಅನುನಾಸಿಕಗಳು
   ಡಿ) ವ್ಯಂಜನಗಳು
2. 'ಆತ್ಮಾರ್ಥಕ ಸರ್ವನಾಮ' ಪದವಿದು –
   ಎ) ಯಾರು?
   ಬಿ) ನಾನು
   ಸಿ) ತಾನು
   ಡಿ) ಮೂಡಣ
3. 'ವ' ಎಂಬುದು ಈ ಕಾಲವನ್ನು ಸೂಚಿಸುವ ಪ್ರತ್ಯಯವಾಗಿದೆ. –
   ಎ) ವರ್ತಮಾನಕಾಲ
   ಬಿ) ಭವಿಷ್ಯತ್‌ಕಾಲ
   ಸಿ) ಭೂತಕಾಲ
   ಡಿ) ಸಕಾಲ
4. 'ಅದ್ದರಿಂದ' ಪದವು ಈ ಅವ್ಯಯದ ಪದವಿದು–
   ಎ) ಸಂಬಂಧಾರ್ಥಕ ಅವ್ಯಯ
   ಬಿ) ಸಾಮಾನ್ಯ ಅವ್ಯಯ
   ಸಿ) ಕ್ರಿಯಾರ್ಥಕ ಅವ್ಯಯ
   ಡಿ) ಕೃದಂತ ಅವ್ಯಯ

**II ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** **12x1=12**

5. 'ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ' ಪ್ರಕಾರ ಸಾಹಿತಿಗಳು ಕೃತಘ್ನರಾಗುವುದು ಯಾವಾಗ?
6. ಪುಟ್ಟರಾಜರು ಸ್ವದೇಶಿ ಆಂದೋಲನಕ್ಕೆ ಕೈ ಜೋಡಿಸುವ ಸಲುವಾಗಿ ಯಾವ ಪ್ರತಿಜ್ಞೆ ಮಾಡಿದರು?
7. ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?
8. ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ಹೇಗೆ ಕಾಣುತ್ತಿದ್ದವು?
9. ಗೋಪಾಲನಿಗೆ ಬಣ್ಣ ಬಣ್ಣದ ಹೂವುಗಳು ಹೇಗೆ ಕಾಣುತ್ತಿದ್ದವು?
10. ಹಾ.ಮಾ. ನಾಯಕರ ಪ್ರಕಾರ ರೋಗಿಗಳು ಯಾರ ಬಳಿ ಹೋಗುತ್ತಾರೆ?
11. ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ?
12. ತಿಮಿರದ ವೈರಿ ಯಾವುದು?
13. ಜನಪದರು ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ?
14. ಬಸವಣ್ಣನವರ ಪ್ರಕಾರ ನಶಿಸುವುದು ಯಾವುದು?
15. ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾರೆ?
16. ಅರ್ಜುನ ಯಾರನ್ನು ನಾಡನರಿ ಎಂದು ಕರೆದಿದ್ದಾನೆ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **8x2=16**

17. ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?
18. ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದಿಕೊಂಡು ಗೂಡು ಕಟ್ಟುವುದಕ್ಕೆ ಲೇಖಕರು ಯಾವ ಉದಾಹರಣೆಗಳನ್ನು ನೀಡುತ್ತಾರೆ?
19. ಹರಿದ್ವಾರಕ್ಕೆ ಕಪಿಲಸ್ಥಾನ ಎಂದು ಹೆಸರು ಬರಲು ಕಾರಣವೇನು?
20. ಸೌಜನ್ಯಶೀಲರ ಲಕ್ಷಣಗಳಾವುವು?
21. ಬಾಳೆಮೀನು ಬೊಬ್ಬೆ ಹೊಡೆಯಲು ಕಾರಣವೇನು?
22. ಲೋಕದಲ್ಲಿ ಕೇಳಿಬರುವ ಸ್ತುತಿ ನಿಂದೆಗಳನ್ನು ಅಕ್ಕಮಹಾದೇವಿಯು ಯಾವುದಕ್ಕೆ ಹೋಲಿಸಿದ್ದಾರೆ?
23. ಶಿಷ್ಯನು 'ಪದ್ಮಪಾದಾಚಾರ್ಯ'ನೆಂದು ಹೇಗೆ ವಿಖ್ಯಾತನಾದನು ಎಂಬುದನ್ನು ವಿವರಿಸಿ?
24. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಿದೆ?

**IV ಕವಿ/ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ** **1x3=3**

25. 'ಕುವೆಂಪು'

**V ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ** **1x3=3**

**26.** ಮೈಕೊಡವಿ ಎದ್ದ ಜಗ ಖಗ ಪಕ್ಷಿ ಪ್ರಾಣಿಗಳು
ಲಗುಬಗೆಯ ದಗದಕ್ಕೆ ಹೊರಟಂತಿದೆ
ಹೊಸತು ಜೀವೋಲ್ಲಾಸ ಚಿಗಿತ ಭಾವವಿಲಾಸ
ನೆಲಮುಗಿಲ ವಾಲಗವೆ ನಡೆದಂತಿದೆ.

**VI ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ** **1x3=3**

27. 'ಸೀತೆಯ ಮುಖಕಮಲ ಅರಳಿತು'

**VII** ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ. **1x3=3**

28. ಮನಸ್ಸಿದ್ದರೆ ಮಾರ್ಗ

ಅಥವಾ

ತುಂಬಿದ ಕೊಡ ತುಳುಕುವುದಿಲ್ಲ

**VIII** ಕೆಳಗಿನ ವಾಕ್ಯ ಅಥವಾ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. **5x3=15**

29. "ನೆರಳು ಕೊಡುವ ವರವನ್ನು ದಯಪಾಲಿಸು."

30. "ನಿನ್ನಂಥ ಶ್ರೇಷ್ಠ ಪುತ್ರರತ್ನವೊಂದನ್ನು ಹೆತ್ತ ಭಾಗ್ಯ ನನ್ನದಾಗಲಿ."

31. "ಮಕ್ಕಳೇ ಒಂದು ಐದು ನಿಮಿಷ ಇರಿ."

32. "ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು."

33. "ಶಿವ ಶಿವ ಕಾದಿಗೆಲಿದೆವು."

**IX** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. **1x4=4**

34. ಕೆಸರೊಳಿದ್ದರು ________________

________________________

________________________

________________ ಸಾರ್ಥಕತೆಗೆ

ಅಥವಾ

ಒಂದು ಬಾಣಕೆ ____________________

________________________

________________________

________________________ಹಗಲಿರುಳು.

**X** ಕೆಳಗಿನ ಪ್ರಶ್ನೆಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **1x4=4**

35. ಸಿದ್ಧಾರ್ಥ ಬುದ್ಧನಾದ ಪರಿ ಹೇಗೆ ಎನ್ನುವ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ

ಅಥವಾ

ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕವಿಗೆ ಹೇಗೆ ಕಂಡುಬಂದಿತು ಎಂಬುದನ್ನು ನಿಮ್ಮ ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.

## XI ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ 1x4=4(2+2)

36. ಯಕ್ಷಗಾನ ನೃತ್ಯಪ್ರಧಾನ ಕಲೆ. ಪ್ರಾರಂಭದಲ್ಲಿ ದೇಶೀ ಕಲೆಯಾಗಿದ್ದು ಅನಂತರ ಶಾಸ್ತ್ರದ ಚೌಕಟ್ಟಿಗೆ ಒಳಪಟ್ಟಿದೆ. ಇದು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುವ ಅಪೂರ್ವ ಶಕ್ತಿಯುಳ್ಳ ಕಲೆ. ಯಕ್ಷಗಾನದಲ್ಲಿ ಪ್ರಾದೇಶಿಕ ಪ್ರಭೇದಗಳಿವೆ. ಅದರಲ್ಲಿ ಮುಖ್ಯವಾದ ಮೂರು ಶೈಲಿಗಳು ತೆಂಕುತಿಟ್ಟು, ಬಡಗುತಿಟ್ಟು ಮತ್ತು ಬಡಬಡಗುತಿಟ್ಟು. ಯಕ್ಷಗಾನಕ್ಕೆ ದಶಾವತಾರ, ಬಯಲಾಟ, ಭಾಗವತರಾಟ ಎಂಬ ಹೆಸರು ಇವೆ. ಸಾಮಾನ್ಯವಾಗಿ ಬಯಲಾಟ ಪ್ರದರ್ಶಿತವಾಗುವುದು ಹಳ್ಳಿಯ ಬಯಲಿನಲ್ಲಿ. ಆದ್ದರಿಂದ ಬಯಲಾಟ, ಯಕ್ಷಗಾನ ಕಲಿಸುವವನೇ ಭಾಗವತ –ನಾದ್ದರಿಂದ ಭಾಗವತರಾಟ ಎಂಬ ಹೆಸರು ಬಂದಿದೆ. ಗೀತೆ, ಕುಣಿತ, ವೇಷಭೂಷಣ, ಮಾತುಗಾರಿಕೆ, ವಾದ್ಯ ಬಯಲಾಟದ ಪಂಚ ಅಂಗ –ಗಳು. ಹಾಡುಗಾರಿಕೆ ಹಾಗೂ ಕುಣಿತ ಯಕ್ಷಗಾನದ ಪ್ರಮುಖ ಅಂಗಗಳು. ಕುಣಿತಕ್ಕೆ ತಕ್ಕಂತೆ ಅಭಿನಯ, ಜಿಗಿತ, ಸಂಭಾಷಣೆ, ಹುಬ್ಬುಗಳ ಚಲನೆ ಪ್ರೇಕ್ಷಕರನ್ನು ತನ್ಮಯಗೊಳಿಸುತ್ತದೆ. ಇದರಲ್ಲಿ ನವರಸಗಳ ಅಭಿವ್ಯಕ್ತಿಗೆ ಅವಕಾಶವಿದೆ. ರಾಮಾಯಣ ಮಹಾಭಾರತ ಮತ್ತು ಭಾಗವತದ ಪ್ರಸಂಗಗಳನ್ನು ಆಡಲಾಗುತ್ತದೆ. ಸಾಮಾನ್ಯವಾಗಿ ಕಾಳಗ, ಸಂಹಾರ ಮತ್ತು ಕಲ್ಯಾಣಗಳಿಗೆ ಸಂಬಂಧಪಟ್ಟ ಪ್ರಸಂಗಗಳೇ ಹೆಚ್ಚು. ಕಾಳಗವಿಲ್ಲದ ಯಕ್ಷಗಾನವಾಗಲೀ, ಬಯಲಾಟವಾಗಲೀ ಇಲ್ಲ. ಯಕ್ಷಗಾನದಲ್ಲಿ ಕೃಷ್ಣಾರ್ಜುನ ಕಾಳಗ, ಕರ್ಣಾರ್ಜುನ ಕಾಳಗ, ಬಭ್ರುವಾಹನ ಕಾಳಗ ಸುಧನ್ವಾರ್ಜುನ ಕಾಳಗ ಮೊದಲಾದವು ವೀರರಸ ಪ್ರಧಾನವಾದವುಗಳು. ಚಂದ್ರಾವಳಿ ವಿಲಾಸ, ರತಿಕಲ್ಯಾಣ, ರತ್ನಾವತಿ ಕಲ್ಯಾಣ, ಮೊದಲಾದ –ವುಗಳು ರಸ ಪ್ರಧಾನ ಪ್ರಸಂಗಗಳು. ಇವಲ್ಲದೆ ಪ್ರಸಿದ್ಧ ಕ್ಷೇತ್ರಗಳ ಕ್ಷೇತ್ರಮಹಾತ್ಮೆಗಳಿವೆ. ಯಕ್ಷಗಾನದ ಎಲ್ಲ ಪ್ರಸಂಗದಲ್ಲೂ ಹಾಸ್ಯ ಕಂಡು ಬರುತ್ತದೆ. ಯಕ್ಷಗಾನ ಜನರಲ್ಲಿ ಧಾರ್ಮಿಕ ಮತ್ತು ನೀತಿ ಪ್ರಜ್ಞೆಗಳನ್ನು ಬೆಳೆಸಲು ಸಹಕಾರಿಯಾಗಿವೆ. ಯಕ್ಷಗಾನ ಪ್ರಸಂಗ ರಚಿಸಿದವರು ದುಷ್ಟನಿಗ್ರಹ ಶಿಷ್ಟಪರಿಪಾಲನೆ ತತ್ವಗಳನ್ನು ಪ್ರಸಂಗದಲ್ಲಿ ಅಳವಡಿಸಿರುತ್ತಾರೆ.

<u>ಪ್ರಶ್ನೆಗಳು</u>

ಅ) ಯಕ್ಷಗಾನದಲ್ಲಿ ಕಂಡು ಬರುವ ವೀರರಸ ಪ್ರಧಾನ ಮತ್ತು ರಸಪ್ರಧಾನ ಕಾಳಗಗಳಾವುವು?

ಆ) ಯಕ್ಷಗಾನಕ್ಕೆ ಬಯಲಾಟ, ಭಾಗವತರಾಟ ಎಂಬ ಹೆಸರುಗಳು ಹೇಗೆ ಬಂದಿವೆ?

## XII ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ 1x4=4

37. 'ಪರಿಸರ ಸಂರಕ್ಷಣೆಯಲ್ಲಿ ನಮ್ಮೆಲ್ಲರ ಪಾತ್ರ'

ಅಥವಾ

'ಮೂಢನಂಬಿಕೆಗಳು'

## XII ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5

38. ನಿಮ್ಮನ್ನು ಯಾದಗಿರಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಮೋಹನ' ಎಂದು ಭಾವಿಸಿಕೊಂಡು ನಿನ್ನ ವರ್ಗಾವಣೆ ಪ್ರಮಾಣ ಪತ್ರವನ್ನು ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಮನವಿ ಪತ್ರ ಬರೆಯರಿ.

ಅಥವಾ

ನಿಮ್ಮನ್ನು ರಾಯಚೂರು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಭಾರ್ಗವ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾಮಿ ವಿವೇಕಾನಂದ ಜಯಂತಿಯ ಕುರಿತು ಮೈಸೂರಿನ ಜಯಚಾಮರಾಜ ಬಡಾವಣೆಯಲ್ಲಿ ವಾಸವಾಗಿರುವ 'ಶರಣಕುಮಾರ' ಎಂಬ ಗೆಳೆಯನಿಗೆ ಪತ್ರವನ್ನು ಬರೆಯಿರಿ.

**************************